5723, (6336) ಶ್ರೀ ಎಂ.ಟಿ.ಕೃಷ್ಣಪ್ಪ (ತುರುವೇಕೆರೆ) :– ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ,

ಅ) ಬೆಂಗಳೂರು ಹಳೆಯ ಕೇಂದ್ರ ಕಾರಾಗೃಹದ ಸ್ಥಳವನ್ನು ಖಾಸಗಿ ಬಸ್ ನಿಲ್ದಾಣವಾಗಿ ಪರಿವರ್ತಿಸಿ ಸದರಿ ಬಸ್ ಮಾಲೀಕರಿಂದ ಪ್ರತಿ ಬಸ್ಸಿಗೆ ನಿಗದಿತ ಶುಲ್ಕವನ್ನು ವಸೂಲು ಮಾಡಿದ್ದಲ್ಲಿ ಪ್ರತಿದಿನ ಸಾರ್ವಜನಿಕರಿಗೆ ಆಗುವ ಸಂಚಾರಿ ಅಡೆತಡೆ ಕಡಿಮೆಯಾಗುವುದಿಲ್ಲವೇ:

ಆ) ಈ ನಿಗದಿತ ಶುಲ್ಕ ವಸೂಲಿ ಮಾಡಿದ್ದಲ್ಲಿ, ಸರ್ಕಾರಕ್ಕೆ ಲಾಭ ಬರುವುದಿಲ್ಲವೆ:

ಇ) ಈ ಕ್ರಮದಿಂದ ಪ್ರತಿದಿನ ಸಂಜೆ ಮತ್ತು ರಾತ್ರಿ ಬೆಂಗಳೂರಿನಿಂದ ಹೊರಡುವ ಖಾಸಗಿ ಬಸ್‌ಗಳು ಮುಖ್ಯ ರಸ್ತೆಗಳಲ್ಲಿ ನಿಲ್ಲುವುದರಿಂದ ಸಂಚಾರಿ ಒತ್ತಡ ಹೆಚ್ಚಿನ ಸಾರ್ವಜನಿಕರಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿಲ್ಲವೇ ?

ಈ) ಇದರ ಜೊತೆಗೆ ಈ ಸ್ಥಳದಲ್ಲಿ ವಾಣಿಜ್ಯ ಸಂಕೀರ್ಣ ನಿರ್ಮಿಸಿದರೆ ಸರ್ಕಾರಕ್ಕೆ ಲಾಭ ಬರುವುದಿಲ್ಲವೇ:

ಶ್ರೀ ಧರ್ಮಸಿಂಗ್, ಮಾನ್ಯ ಮುಖ್ಯ ಮಂತ್ರಿಗಳು

ಅ) ಇಂತಹ ಪ್ರಸ್ತಾವನೆಯು ಸರ್ಕಾರದ ಮುಂದಿರುವುದಿಲ್ಲ, ಸದರಿ ಪ್ರದೇಶವನ್ನು ಫ್ರೀಡಂ ಪಾರ್ಕ್ ಆಗಿ ಅಭಿವೃದ್ಧಿಪಡಿಸುವ ಪ್ರಸ್ತಾವನೆ ಪರಿಶೀಲನೆಯಲ್ಲಿದೆ.

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಈ) ಉದ್ಭವಿಸುವುದಿಲ್ಲ.

5724,(6337)ಶ್ರೀ ಕೃಷ್ಣಪ್ಪ ಎಂ. ಟಿ. (ತುರುವೇಕೆರೆ) :– ಮಾನ್ಯ ಮುಖ್ಯಮಂತ್ರಿಗಳು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ,

ಅ) ನಕ್ಸಲ್‌ರ ದಮನಕ್ಕೆ ಸರ್ಕಾರ ಯಾವ ಯಾವ ಕ್ರಮ ಕೈಗೊಂಡಿದೆ:

ಆ) ಪೊಲೀಸ್ ಕಾರ್ಯಾಚರಣೆಗಿಂತ ಮಾತುಕತೆ ಉತ್ತಮವಲ್ಲವೇ:

ಇ) ನಕ್ಸಲೈಟ್ ಚಟುವಟಿಕೆಯಿಂದ ಹತರಾದ ಕುಟುಂಬದವರಿಗೆ ಪರಿಹಾರ ನೀಡಲಾಗಿದೆಯೇ ?

ಶ್ರೀ ಧರ್ಮಸಿಂಗ್, ಮಾನ್ಯ ಮುಖ್ಯ ಮಂತ್ರಿಗಳು

ಅ) ನಕ್ಸಲ್ ಪೀಡಿತ ಪ್ರದೇಶಗಳಲ್ಲಿ ನಕ್ಸಲೀಯರು ಕಾನೂನು ಬಾಹಿರ ಚಟುವಟಿಕೆಗಳನ್ನು ನಡೆಸದಂತೆ ತಡೆಯಲು ರಾಜ್ಯ ಸರ್ಕಾರವು ಆ್ಯಂಟಿ ನಕ್ಸಲ್ ಫೋರ್ಸ್‌ನ್ನು ಸೃಜಿಸಿ ಕಾರ್ಯೋನ್ಮುಖವಾಗಿರುತ್ತದೆ.

ರಾಜ್ಯ ಸರ್ಕಾರವು ಗಡಿಭಾಗದಲ್ಲಿರುವ 44 ಪೊಲೀಸ್ ಠಾಣೆಗಳನ್ನು ಪೊಲೀಸ್ ಆಧುನೀಕರಣ ಯೋಜನೆಯಡಿಯಲ್ಲಿ ಉನ್ನತೀಕರಿಸಿ ಹೆಚ್ಚಿನ ಸಿಬ್ಬಂದಿ, ರಕ್ಷಣಾ ಪೂರಕವಾದ ಕಟ್ಟಡಗಳು ಹಾಗೂ ಆಧುನಿಕ ಶಸ್ತ್ರಾಸ್ತ್ರಗಳನ್ನು ಪೂರೈಸಿ ಶಕ್ತಿಯುತವಾಗಿರಲು ಕ್ರಮ ಕೈಗೊಳ್ಳಲಾಗಿದೆ.

ಇದರ ಜೊತೆಗೆ ಪೂರಕವಾಗಿ ನಕ್ಸಲ್ ಸಮಸ್ಯೆಯನ್ನು ನಿಗ್ರಹಿಸಲು ನಕ್ಸಲ್ ಪೀಡಿತ ಜಿಲ್ಲೆಗಳಲ್ಲಿ ಅಭಿವೃದ್ಧಿ ಕಾರ್ಯಕ್ರಮಗಳನ್ನು ಸರ್ಕಾರವು ಹಮ್ಮಿಕೊಂಡಿರುತ್ತದೆ.

ಆ) ಮಾತುಕತೆ ನಡೆಸಲು ಸರ್ಕಾರ ಸಿದ್ಧವಾಗಿದೆ. ಆದರೆ ನಕ್ಸಲೀಯರು ಶಸ್ತ್ರಾಸ್ತ್ರ ಕೆಳಗಿಟ್ಟ ನಂತರವೇ ಮಾತುಕತೆ ಸಾಧ್ಯ

ಇ) ನಕ್ಸಲೀಯರು ದಾಳಿಯಿಂದ ಮೃತಪಟ್ಟ ಕುಟುಂಬದವರಿಗೆ ಸರ್ಕಾರವು ಈ ಕೆಳಕಂಡಂತೆ ಪರಿಹಾರ ನೀಡಿದೆ.

1. ದಿನಾಂಕ : 10–02–2005ರಂದು ತುಮಕೂರು ಜಿಲ್ಲೆ ಪಾವಗಡ ತಾಲ್ಲೂಕು, ತಿರುಮಣಿ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಕ್ಸಲೀಯರ ದಾಳಿಯಿಂದ 07 ಕೆ. ಎಸ್. ಆರ್. ಪಿ. ಪೊಲೀಸ್ ಅಧಿಕಾರಿ/ಸಿಬಂಧಿಗಳು ಮೃತಪಟ್ಟಿದ್ದು, ಇವರ ಕುಟುಂಬದವರಿಗೆ ಪರಿಹಾರವನ್ನು ಈ ಕೆಲಕಂಡಂತೆ ನೀಡಲಾಗಿದೆ.

ಅ) ಹತ್ಯೆಗೀಡಾದ ಪೊಲೀಸ್ ಅಧಿಕಾರಿ/ಸಿಬ್ಬಂಧಿಯವರ ಪ್ರತಿ ಕುಟುಂಬದವರಿಗೆ ರೂ. 5,00,000–00ಗಳ ಪರಿಹಾರ ನೀಡಲಾಗಿರುತ್ತದೆ.

ಆ) ಮೃತಪಟ್ಟ ಅಧಿಕಾರಿ/ನೌಕರನು ಅಂತಿಮವಾಗಿ ಪಡೆದ ವೇತನವನ್ನು ಅವರು ಮೃತಪಟ್ಟ ದಿನಾಂಕದಿಂದ ಮೃತಪಟ್ಟ ಅಧಿಕಾರ/ನೌಕರನು ವಯೋನಿವೃತ್ತರಾಗುತ್ತಿದ್ದ ದಿನಾಂಕದವರೆಗೆ ನೀಡಲಾಗುವುದು, ವಯೋ ನಿವೃತ್ತಿಯ ದಿನಾಂಕದ ನಂತರ ಕುಟುಂಬಕ್ಕೆ ನಿಯಮಗಳ ಪ್ರಕಾರ ಲಭ್ಯವಾಗುವ ಕುಟುಂಬ ವಿಶ್ರಾಂತಿ ವೇತನವನ್ನು ನೀಡಲಾಗುವುದು.

ಇ) ನಿಯಮಗಳ ಮೇರೆಗೆ ನೀಡಬಹುದಾದಂತೆ ಆತನ ಮರಣದ ದಿನಾಂಕದಂದು ಆತನು ಮರಣದ ದಿನಾಂಕದಂದು ಆತನು ಪಡೆಯುತ್ತಿದ್ದ ಮನೆ ಬಾಡಿಗೆ ಭತ್ಯೆಯನ್ನು ಅಥವಾ ಬಾಡಿಗೆ ರಹಿತ ವಸತಿ ಸೌಲಭ್ಯವನ್ನು ಅವನಿಗೆ ಒದಗಿಸದೇ ಇದ್ದಲ್ಲಿ ಆತನು ಪಡೆಯಲು ಅರ್ಹನಾಗುತ್ತಿದ್ದ ಮನೆ ಬಾಡಿಗೆ ಭತ್ಯೆಯನ್ನು ಮೃತ ಅಧಿಕಾರಿ/ನೌಕರನ ವಯೋನಿವೃತ್ತಿಯ ಅವಧಿಯವರೆಗೆ ನೀಡಲಾಗುವುದು.

ಈ) ಮೃತಪಟ್ಟ ಪೊಲೀಸ್ ಅಧಿಕಾರಿ/ಸಿಬ್ಬಂಧಿಯವರ ಕುಟುಂಬದ ಅರ್ಹ ವ್ಯಕ್ತಿಗೆ ವಿದ್ಯಾರ್ಹತೆ ಮೇರೆಗೆ ಅನುಕಂಪದ ಆಧಾರದ ಮೇಲೆ ನೇಮಕಾತಿ ಆದೇಶ ಹೊರಡಿಸಲಾಗಿದೆ.

2. ನಕ್ಸಲೀಯರ ದಾಳಿಯಲ್ಲಿ ಮೃತಪಟ್ಟ 2 ನಾಗರೀಕ ಕುಟುಂಬದವರಿಗೆ ಈ ಕೆಳಕಂಡಂತೆ ಪರಿಹಾರವನ್ನು ನೀಡಲಾಗಿದೆ.

1. ದಿನಾಂಕ:10.02.2005 ರಂದು ವೆಂಕಟಮ್ಮನಹಳ್ಳಿಯಲ್ಲಿ ನಕ್ಸಲ್ ದಾಳಿಯಲ್ಲಿ ಮೃತನಾದ ಓರ್ವ ನಾಗರೀಕ ಹನುಮಂತ ಎಂಬುವವನಿಗೆ ಸರ್ಕಾರದಿಂದ 1 ಲಕ್ಷ ರೂಪಾಯಿ ಪರಿಹಾರ ಹಣವನ್ನು ನೀಡಲಾಗಿದೆ.
2. ದಿನಾಂಕ:17–05–2005 ರಂದು ಚಿಕ್ಕಮಗಳೂರು ಜಿಲ್ಲೆ, ಕೊಪ್ಪ ತಾಲ್ಲೂಕು, ಮೆಣಸಿನಹಾಡ್ಯದಲ್ಲಿ ನಕ್ಸಲರಿಂದ ಹತರಾದ ಶೇಷಪ್ಪ ಬಿನ್ ಶೇಷೇಗೌಡ ಎಂಬುವರಿಗೆ ಸರ್ಕಾರದಿಂದ 2 ಲಕ್ಷ ರೂಪಾಯಿ ಪರಿಹಾರ ಹಣವನ್ನು ನೀಡಲಾಗಿದೆ.

5726. (6341) ಶ್ರೀ ಮಲ್ಲಿಕಾರ್ಜುನ್ ಸಿದ್ರಾಮಪ್ಪ ಖೂಬಾ (ಬಸವಕಲ್ಯಾಣ) :– ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ,

ಅ) ಬೀದರ್ ಜಿಲ್ಲೆಯಲ್ಲಿ ಗಣಿ ಮತ್ತು ಭೂವಿಜ್ಞಾನ ಇಲಾಖೆಯವರ ವತಿಯಿಂದ ನಡೆದ ಖನಿಜ ಸಂಶೋಧನೆ ಮತ್ತು ಅಂತರ್ಜಲ ಅನ್ವೇಷಣೆಯ ಕುರಿತಾದ ಕಾರ್ಯಕ್ರಮಗಳೇನು; (ವಿವರ ನೀಡುವುದು):